ಶ್ರೀ ಹೆಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರಿಗೆ ಇದರ ಹಿನ್ನೆಲೆ ಕೆಲವರಿಗೆ ಗೊತ್ತಿಲ್ಲ. ಮಾನ್ಯ ಲೀಡರ್‌ರವರಿಗೆ ಗೊತ್ತು. ಈ ಶರಾವತಿ ಕೆಲಸಕಾರ್ಯಗಳು ನಡೆಯುವ ಕಾಲದಲ್ಲಿ ಹೆಚ್. ಇ. ಸಿ. ಪಿ. ಬೋರ್ಡ್ ಇತ್ತು. ಅದರ ವಿವರಣೆ ನೋಡಬೇಕು ಕೆಲವು ಮತ್ತೆ ಕಾಲದ ನಂತರ ಹೆಚ್. ಇ. ಸಿ. ಪಿ. ವಜಾ ಆಯಿತು. ಆದಾದ ಮೇಲೆ ಡಬ್ಲ್ಯು. ಆರ್. ಡಿ. ಓ. ಆಯಿತು. ಆವಾಗ ಇದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು ಸರ್ಕಾರಕ್ಕೆ ಬಂದಿವೆಯೇ ಡಬ್ಲ್ಯು. ಆರ್. ಡಿ. ಓ. ಗೆ ಹೋದವೇ ಎನ್ನುವುದನ್ನು ನೋಡಬೇಕು. ಮತ್ತು ಕೆಲವು ಕಾಲದ ಮೇಲೆ ಎಂ. ಪಿ. ಸಿ. ಆಗಿ ಹೋಯಿತು. ಈಗ ಶರಾವತಿಗೆ ಸಂಬಂಧಪಟ್ಟ ಕಾಗದ ಪತ್ರಗಳು ಅಲ್ಲಿಗೆ ಹೋಗಿವೆ ಅದನ್ನು ನೋಡಬೇಕು. ಈ ಕಾಗದ ಪತ್ರಗಳು ಎಲ್ಲೆಲ್ಲಿಗೆ ಹೋಯಿತು ಎನ್ನುವುದನ್ನು ನೋಡಬೇಕು. ಇವೆಲ್ಲಾ ವಿಷಯಗಳನ್ನು ಸಂಗ್ರಹಣೆ ಮಾಡಬೇಕಾದರೆ ಸ್ವಲ್ಪ ಕಾಲ ಹಿಡಿಯುತ್ತದೆ. ಆದುದರಿಂದ ಅದಕ್ಕೆ ಅವಕಾಶ ಬೇಕಾಗುತ್ತದೆ.

ಶ್ರೀ ಕೆ. ಪ್ರಭಾಕರ್ —(ಎ) ಪ್ರಶ್ನೆಗೆ ಉತ್ತರ ಕೊಟ್ಟಿರುವುದರಲ್ಲಿ ಕೊನೆಯಲ್ಲಿ ತನಿಖೆಗಳನ್ನು ಇನ್ನೂ ಮುಂದುವರೆಸಲಾಗುತ್ತಿದೆ ಎಂದಿದೆ. ಯಾವ ಯಾವ ಲೈನ್ ಮೇಲೆ ಎಷ್ಟೆಷ್ಟು ಪ್ರೋಗ್ರೆಸ್ ಆಗಿದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಉತ್ತರದಲ್ಲೇ ಕೊಟ್ಟಿದೆ. ವರದಿ ನೋಡಿದರೆ ಗೊತ್ತಾಗುವುದು. ತಲೆಕಳಲೆ ಡ್ಯಾಂ, ಒಡೇನ್ ಬೈಲ್ ಚಾನಲ್ ಇವುಗಳು ಬಗ್ಗೆ ಪರಿಶೀಲನೆ ನಡೆಯುತ್ತಿದೆ. ಪ್ರತಿಯೊಂದು ಪರಿಶೀಲನೆಯಾಗ ಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಹಿಂದಿನ ವರದಿ ಪ್ರಕಾರ ಡ್ಯಾಂನಲ್ಲಿ ಲೀಕೇಜ್ ಆಗುತ್ತಿದೆ ಎಂದು ಗೊತಾಗಿದ್ದುದು ನಿಂತಿದೆಯೇ? ಕೆಲವು ಕಡೆ ರಿಪೇರಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ತಿಳಿದುಬಂದಿದೆ. ಡ್ಯಾಂನಲ್ಲಿ ಲೀಕ್ ಆಗುವುದನ್ನು ನಿಲ್ಲಿಸಲು ಸಾಧ್ಯವಿಲ್ಲ ಎಂದು ತಿಳಿದುಬಂದಿದೆ. ಜಾಸ್ತಿ ಲೀಕ್ ಆಗುತ್ತಿದೆಯೇ? ಅದನ್ನು ನಿಲ್ಲಿಸಲು ಸಾಧ್ಯವಿಲ್ಲವೇ? ಇದರ ಬಗ್ಗೆ ಏನಾದರೂ ಕೇಳಲು ಸಾಧ್ಯವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ಪೆಟಿಂಗನ್ನು ಲೀಕೇಜ್ ಎಂದು ಹೇಳಬಹುದೆಂದು ಕಾಣುವುದು. ಈ ಎರಡಕ್ಕೂ ವ್ಯತ್ಯಾಸವಿದೆ. ಸ್ಪೆಟಿಂಗ್ ಸ್ವಲ್ಪ ಪ್ರಮಾಣದಲ್ಲಿದೆ. ಸ್ಪೆಟಿಂಗ್ ಆಗಿ ಬಂದ ನೀರು ಏನಿದೆ ಅದರ ಹನಿ ಕೂಡಿ ಹರಿಯುವುದು, ಅದು ಲೀಕೇಜ್ ಎಂದು ಹೇಳುತ್ತಿದಾರೆಂದು ಕಾಣುತ್ತದೆ. ನೀರು ಸ್ವಚ್ಛವಾಗಿ ಬಂದರೆ ಅದರಿಂದ ಡ್ಯಾಂಗೆ ಯಾವ ವಿಧವಾದ ಅಪ್ಪ ಘಾತವೂ ಇಲ್ಲ ಎಂದು ಕೇಳುವವರೂ ಇದ್ದಾರೆ, ಸ್ವಚ್ಛವಾಗಿ ಬಾರದಿದ್ದರೆ, ಕಸ, ಮಾರ್ಟರ್ ಬಂದರೆ ಡ್ಯಾಮೇಜ್ ಆಗಿದೆ ಎಂದು ಭಾವಿಸಬೇಕೆಂದು ತಜ್ಞರು ಕೆಲವರು ಹೇಳುವರು. ಇದಕ್ಕಾಗಿ ಎಷ್ಟು ಪ್ರಮಾಣದಲ್ಲಿ ಕನಕಡ್ಡಿ ಬರುವುದು ಎಂಬುದನ್ನು ಕೂಡ ನೋಡಲು ಕೆಲವುಕಾಲ ಆ ನೀರನ್ನು ಕ್ಲೋರಿನ್ ಪರ್ಸಂಟೇಜ್ ನೋಡುವ ಕಾರ್ಯ ಕ್ರಮವಿದೆ. ಈಗ ತಿಳಿದಮಟ್ಟಿಗೆ ಸ್ಪೆಟಿಂಗ್‌ನಲ್ಲಿ ನೀರು ಸ್ವಚ್ಛವಾಗಿ ಬರುತ್ತಿದೆ ಎಂದು ವರದಿಯಾಗಿದೆ. ಇದನ್ನು ಸ್ವಲ್ಪಮಟ್ಟಿಗೆ ಪರಿಶೀಲಿಸಲು ಕಾಲ ಬೇಕು.

LIFT IRRIGATION IN BIDAR DISTRICT

354. Sri V. N. PATIL (Humnabad).—

Will the Minister for Public Works and Electricity be pleased to state:—

(*a*) whether there is proposal before the Government to take up Lift Irrigation Scheme in Bidar district;

(*b*) if so, the places which have been surveyed and the schemes of which plans and estimates have been approved by the Government for Lift Irrigation (Taluk-wise figures of such schemes may please be furnished);

(*c*) whether the Government is aware that there is a great potentiality for Lift Irrigation in Bidar District by the river Manjra, Karanja and Nagarahalla in Bidar District;

(*d*) if so, whether this aspect was examined, survey of Lift Irrigation potential made and any plans and estimates are prepared by the Government to undertake Lift Irrigation works;

(*e*) the number of schemes for Lift Irrigation in Bidar District ready for implementation during the course of this financial year and the probable time required for completion of such schemes?

Sri H. M. CHANNABASAPPA (Minister for Public Works and Electricity).—

(*a*) Yes.

(*b*) The following three Lift Irrigation Schemes have been approved.

1. L.I. Scheme near Chimkod Village, Bidar Taluk.
2. L.I. Scheme near Nittur (Site No. 1) Village, Bhalki Taluk.
3. L.I. Scheme near Chota Nittur Aurad Taluk.

(*c*) Yes.

(*d*) Yes.

(*e*) It has been decided to take up Lift Irrigation Scheme near Islampur Village, Bidar Taluk. It is proposed to be completed before 31st March 1973.

ಶ್ರೀ ವಿ. ಎನ್. ಪಾಟೀಲ್.—ಫ್ಯಾಮಿನ್ ರಿಲೀಫ್ ಕೆಲಸದ ಸಂಬಂಧದಲ್ಲಿ ಮಂತ್ರಿಗಳು ಬಂದಿದ್ದಾಗ 35 ಯೋಜನೆಗಳ ಕೆಲಸವಿದೆ, ಅವನ್ನು ತೆಗೆದುಕೊಳ್ಳಲು ತಕ್ಷಣ ಆಜ್ಞೆ ಮಾಡುವುದಾಗಿ ಹೇಳಿದರು, ಅದರಲ್ಲಿ ಎಷ್ಟು ಕೆಲಸಗಳ ಬಗ್ಗೆ ಸರ್ವೆಯಾಗಿದೆ ಮತ್ತು ಏನು ಕ್ರಮ ಕೈಕೊಳ್ಳಲಾಗಿದೆ ಎಂಬುದನ್ನು ತಿಳಿಸುವಿರಾ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಆಜ್ಞೆ ಮಾಡಿದ ಪರಿಣಾಮವಾಗಿಯೇ ಅಲ್ಲಿ ಲಫ್ಟ್ ಇರಿಗೇಷನ್ ಯೋಜನೆಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಆ ಬಗ್ಗೆ ನಿರ್ಧಾರಮಾಡಿ ಈಗಾಗಲೆ ಅನುಮತಿ ಕೊಟ್ಟಿರುವ ಕೆಲಸಗಳಲ್ಲದೆ ಇನ್ನೂ 5 ಕೆಲಸಗಳನ್ನು ತೆಗೆದುಕೊಳ್ಳಲು ತಿಳಿಸಿದೆ. ಹರಂದನ್ ನಾಲ, ಖಾನಪುರದ ಕೆಲಸ, ಚಿಕರ್ಗಿ, ಚಂಬರ್, ಶ್ರೀಮಂಡರ್ ಮುಂತಾದ ಕಡೆಯ ಕೆಲಸಗಳನ್ನು ಮತ್ತು ಬಿದರೆ ಜಿಲ್ಲೆಯಲ್ಲಿ ಮಾಂಜ್ರ, ಕಾರಂಜ, ದೇವ್ರನಾಲ ಮುಂತಾದುವುಗಳಿಗೆ ಸಂಬಂಧಪಟ್ಟ ಕೆಲಸಗಳನ್ನು ಸಹ ಕೈಗೆಳ್ಳಲು ಪ್ರಯತ್ನ ನಡೆದಿದೆ. ಇದಕ್ಕೆ ನುಮಾರು 7 ಲಕ್ಷ 16 ಸಾವಿರ ರೂಪಾಯಿಗಳ ಅಂದಾಜಿದೆ.

ಶ್ರೀ ವಿ. ಎನ್. ಪಾಟೀಲ್.—ಬೀದರ್ ಜಿಲ್ಲೆಯಲ್ಲ 4 ನಣ್ಣನಣ್ಣ ನದಿಗಳಿವೆ, ಮಂಜ್ರ, ಕಾರಂಜ ಭೀಮ್ಮ, ಕೃಷ್ಣ. ಇವಗಳಿಂದ ಅನುಕೂಲವಾಗುವ ಕೆಲಸಗಳ ಬಗ್ಗೆ ಸರ್ವೆ ಆಗಬೇಕಾಗಿತ್ತು. ಡ್ರೀಜ್ಮೆರ್ ಸರ್ವೆಯನ್ನು ಒಂದು ತಿಂಗಳಲ್ಲಿ ಇವುಗಳ ಬಗ್ಗೆ ಮಾಡುವಂತೆ ಆಜ್ಞೆ ಮಾಡುವಿರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಹೇಳುವುದನ್ನು ಸರಕಾರ ವಿಚಾರ ಮಾಡುತ್ತದೆ. ಬೇಸಿಗೆಯಲ್ಲಿ ಏಲ್ಲ ನೀರಿರುವುದು ಎಂಬುದು ಮುಖ್ಯವಾದುದು. 5 ಹೊಳೆ ಅಲ್ಲಿದ್ದರೂ ಬೇಸಿಗೆಯಲ್ಲಿ ಅವುಗಳಲ್ಲಿ ಏಲ್ಲ ನೀರು ದೊರೆಯುವುದು ಎಂಬುದನ್ನು ನೋಡಬೇಕಾಗಿದೆ, ಆದು ಆವಶ್ಯಕ. ಎಲ್ಲಿ ಅದು ದೊರೆಯುವುದೋ ಅಲ್ಲಿ ಪೈಪ್‌ಲೈನ್ನನ್ನು ಹೊದಲು ಹಾಕಬೇಕು ಎಂದು ಹುಕುಂ ಮಾಡಲಾಗಿದೆ. ಈ ತಿಂಗಳು 30ನೆ ತಾರೀಖಿನೊಳಗೆ 160 ಕಿಲೋಮೀಟರು

(ಶ್ರೀ ಎಚ್. ಎಂ. ಚನ್ನಬಸಪ್ಪ)

ಅಂದರೆ ಸುಮಾರು 110 ಮೈಲಿಯಲ್ಲಿ ಸುಮಾರು ಒಂದೂವರೆ ಕೋಟಿ ರೂಪಾಯಿ ವೆಚ್ಚದಲ್ಲಿ ಭೀವಾ, ಕಾರಂಜ ಕೃಷ್ಣಾ, ಕಾಗ್ನಾ, ಕುಳ್ಳಬಾರಿ ಮುಂತಾದ ನದಿ ದಂಡೆಗಳಲ್ಲಿ ವಿದ್ಯುತ್ ರೈತನು ಹಾಕಬೇಕು ವಿದ್ಯುತ್ ಕೊಡಬೇಕು ಎಂದು ಆಜ್ಞೆ ಮಾಡಲಾಗಿದೆ. ಆದರಂತೆ ಮಾಡುವ ನಿರೀಕ್ಷಣೆ ಇದೆ. ಇದರಿಂದ ಸಾರ್ವಜನಿಕರು ಯಾರು ಬೇಕಾದರೂ ವಿದ್ಯುಚ್ಛಕ್ತಿ ಪಡೆದು ನೀರು ಉಪಯೋಗ ಮಾಡಬಹುದು. ಜೊತೆಗೆ ಸರಕಾರ ಕೂಡ ಅಲ್ಲಿ ಯೋಗ್ಯವಾಗಿರುವ ಜಮೀನುಗಳಿರುವ ಕಡೆ ನೀರೆತ್ತುವ ಯೋಜನೆ ಮಂಜೂರು ಮಾಡಿ ಸರಕಾರವೇ ನೇರವಾಗಿ ಕೆಲಸ ಮಾಡಬೇಕು ಎಂಬ ಅಭಿಪ್ರಾಯವಿದೆ.

ಶ್ರೀ ಬಾಪುರಾವ್ ಪಾಟೀಲ್.—ಹಿಂದಿ (ಉತ್ತರವಿಲ್ಲ)

ಶ್ರೀ ಕೋಣಂದೂರು ಲಿಂಗಪ್ಪ.—ಎಂಟು ದಿವಸಗಳೊಳಗಾಗಿ ಲಿಫ್ಟ್ ಇರಿಗೇಷನ್ನಿಗೆ ಅವಕಾಶ ಮಾಡುವುದಾಗಿ ಹೇಳಿ ನಿಧಾನಮಾಡುವುದು ಸರಿಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಂಟು ದಿವಸ ಎಂದು ನಾನು ಹೇಳಿಲ್ಲ, ಎಷ್ಟು ಬೇಗ ಸಾಧ್ಯ ಅಷ್ಟು ಬೇಗ ಮಾಡುವುದಾಗಿ ಹೇಳಿತ್ತು.

PAY SCALES OF THE POST OF PHYSICAL EDUCATION TEACHERS.

374. Sri V. M. GHADI (Haliyal).—

Will the Minister for Education be pleased to state:—

(*a*) whether it is a fact that at present the scale of pay sanctioned in Government Order No. E.D. 167 DPI 70, dated 23rd March 1971 is allowed to the Physical Education Teachers of Government High School only to the utter discrimination of Private High School Teachers;

(*b*) whether it is not the policy of the Government to sanction uniform scales of pay to the teachers of various categories working in all sectors, *viz.*, Government, Local Body, Private Aided Management ?

Sri A. R. BADARINARAYANA.—(Minister for Education).—

(*a*) No. The scales of pay sanctioned in Government Order No. ED 167 DPI 70, dated 23rd March 1971 have been extended to teachers in Local Body and Aided Schools also.

(*b*) Does not arise in view of reply to clause (*a*) above.

ಶ್ರೀ ವಿ. ಎಂ. ಘಾಡಿ.—ಖಾಸಗೀ ಪ್ರೌಢಶಾಲೆಗಳ ಶಿಕ್ಷಕರು ಕೊಟ್ಟ ಮನವಿಗೆ ಈ ಸ್ಕೇಲು ಅನ್ವಯಿಸುವುದಿಲ್ಲ ಎಂದು ಅಲ್ಲಿಯ ಅಧಿಕಾರಿಗಳು ಹೇಳುತ್ತಿದ್ದಾರಲ್ಲಾ ?

† ಶ್ರೀ ಎ. ಆರ್. ಬದರಿನಾರಾಯಣ.—ಅವರಿಗೂ ಇದು ಅನ್ವಯಿಸುತ್ತದೆ.

ಶ್ರೀ ವಿ. ಎಂ. ಘಾಡಿ.—ಈ ಬಗ್ಗೆ ಸರ್ಕಾರಿ ಆರ್ಡರನ್ನು ಹೊರಡಿಸಲಾಗಿದೆಯೇ ?

ಶ್ರೀ ಎ. ಆರ್. ಬದರಿನಾರಾಯಣ.—ಹೊರಡಿಸಲಾಗಿದೆ.